ಮದುವೆ ವಿಜೃಂಭಣೆಯಿಂದ ನಡೆದಿತ್ತು. ಸಾವಿರಾರು ಜನ ಬಂದಿದ್ದರು. ಮದುವೆ ಆಗುವಾಗ ಭಟ್ರು ದುಡ್ಡಿಡು ಎಂದರೆ ನಾಣ್ಯವನ್ನು ಮೊಗೆದು ಇಡುತ್ತಿದ್ದರು. ಬ್ಯಾಂಕಿನಿಂದ ಕೈಚೀಲದಲ್ಲಿ ನಾಣ್ಯ ತಂದಿದ್ದರು. ಆದರೆ ಮಗಳ ಮದುವೆ ಮಾಡಿ ಕಳಿಸಿದ ಮನೆಯಲ್ಲಿ ಆಸ್ತಿ ಅಷ್ಟೇನೂ ಇರಲಿಲ್ಲ. ಒಂದು ಸಣ್ಣ ತೋಟ, ಸೋಗೆ ಹೊದೆಸಿದ ಮನೆ. ಪೈಟಾಗಿ ನೋಡಿಕೊಂಡರೆ ಅಲ್ಲಿಂದಲ್ಲಿಗೆ ಆಗುವಷ್ಟು ಇತ್ತು. ಹೆಗಡೆಯವರು ದರ್ಬಾರು ಮಾಡಿದ ಕಾಲದಲ್ಲಿ ಮಗಳ ಮನೆಗೆ ಹೋಗುವುದು ಕಮ್ಮಿಯಾಗಿತ್ತು. ಹೋದರೂ ರಾತ್ರಿ ಉಳಿಯುತ್ತಿರಲಿಲ್ಲ. ಈಗ ಪದೆಪದೇ ಹೋಗಲು ಶುರು ಮಾಡಿದ್ದರು. ಮಗಳಿಗೆ ಖುಷಿಯೊ ಖುಷಿ. ಹೀಗೆ ಒಮ್ಮೆ ಹೋಗಿದ್ದಾಗ ಮಾತಾಡ್ತ ಮಾತಾಡ್ತ, ‘ತಂಗಿ ಅಗದಿ ಅರ್ಜೆಂಟ್ ಇತ್ತು, ನಿನ್ನ ಬಂಗಾರ ಬಗೇಲಿ ಕೊಡ್ತೆಯಾ? ಒಂದು ತಿಂಗಳಲ್ಲಿ ಬಿಡಿಸಿ ಕೊಡ್ತೆ’ ಎಂದು ಕೇಳಿದ್ದರು. ಅವಳ ಹತ್ತಿರ ದುಡ್ಡಿರುವುದಿಲ್ಲ ಎನ್ನುವುದು ಅವರಿಗೆ ಗೊತ್ತಿತ್ತು. ಅವಳು ತೆಗೆದು ಕೊಟ್ಟಳು. ಕಡೆಗೆ ಅಲ್ಲಿಗೆ ಹೋಗುವುದನ್ನೇ ಕೈದು ಮಾಡಿದ್ದರು!

ಅವರ ಕಪಟತನ ಮನೆಯವರನ್ನು ರೊಚ್ಚಿಗೆಬ್ಬಿಸಿತು. ಇಷ್ಟೆಲ್ಲ ಬುದ್ಧಿವಂತ ಎನಿಸಿದವ ಒಬ್ಬ ಅಪ್ಪಂತವನಾಗಿ ಇರದೆ ಲಫಂಗನ ಹಾಗೆ ತನ್ನನ್ನು ನಂಬಿದ ಮನೆಮಂದಿಯನ್ನು ಗುಂಡಿಗೆ ಹಾಕುತ್ತಾನಲ್ಲ ಎಂದು. ಇದೆಲ್ಲ ಒಳಗೊಳಗೆ ಉರಿಯ ಮೇಲಿನ ಅನ್ನದ ಹಾಗೆ ಗೊಜಗುಡುತ್ತಿರುವುದು ಹೇಗೊ ಹಿರಿಯ ಮಗ ಶಾಂತಾರಾಮನಿಗೆ ಗೊತ್ತಾಯಿತು. ಆತ ರೇಗಾಡತೊಡಗಿದ. ‘ಒಂದೆಡೆ ತಂಗಿ ಮದುವೆಗೆ ಬಂದಿದ್ದಾಳೆ, ತಮ್ಮನಿಗೆ ನೌಕರಿ ಕೊಡಿಸಬೇಕಾಗಿದೆ, ಇರುವುದನ್ನು ಹೀಗೆ ಹಾಳು ಮಾಡಿದರೆ... ಮಾರಬಹುದಾದ ಆಸ್ತಿ ಮಾರಿಯಾಗಿದೆ. ಇನ್ನುಳಿದಿರುವುದು ಸಣ್ಣ ತೋಟ ಮಾತ್ರ. ಅದೂ ಪೂರ್ತಿ ಸಾಲದ ಮೇಲಿದೆ. ಮತ್ತೂ ಎಡ್ರಾಬಿರ್‍ರಿತನ ಮುಂದುವರಿಸಿದರೆ, ಜನ ಹೇಳುವ ಹಾಗೆ ತೆಂಗಿನ ಗರಟೆಯೇ ಗತಿ. ಇನ್ನು ಸುಮ್ಮನಿದ್ದರೆ ಆಗುವುದಿಲ್ಲ, ಏನು ಬೇಕಾದ್ರೂ ಆಗಲಿ, ಒಂದೋ ನಾನು ಮನೆಯಲ್ಲಿ ಇರಬೇಕು, ಇಲ್ಲಾ ಅವನು ಮನೆಯಲ್ಲಿರಬೇಕು; ಎರಡರಲ್ಲಿ ಒಂದು ನಿಕ್ಕಿಯಾಗೊ...’ ಎಂದು ಕೂಗಾಡತೊಡಗಿದ.

ಎಲ್ಲರಿಗೂ ಗಾಬರಿ, ಆತಂಕ, ಮುಂದೆ ಎಂತಹ ಭಾನ್ಗಡಿ ಆದೀತೊ ಎಂದು. ಅವನು ಹೇಳುವುದು ಸರಿಯಿದೆ. ಆದರೆ ದುಡುಕಿದರೆ ಸಿಡುಕಿನ ಅಪ್ಪ...

‘ಏನ್ ಬೇಕಾದ್ರೆ ಮಾಡ್ಕಳಿ, ನಾ ಎಂಥ ಮಾಡ್ತೆ?’ ಎಂದು ಕಮಲಮ್ಮ ಚಡಪಡಿಸತೊಡಗಿದಳು.

ಹೇಗಿದ್ದರೂ ಬೀದಿಗೆ ಬರುವದೇ. ಎಷ್ಟು ದಿನ ಎಂದು ಹೀಗೆ ಹೊಗೆಯಾಡುತ್ತ ಇರುವುದು? ಒಮ್ಮೆ ಹತ್ತಿ ಉರಿಯಲಿ, ಆಗಲಾದರೂ ಒಂದು ಹಂತಕ್ಕೆ ಬರಬಹುದು ಎಂದು ಮಾನಸಿಕವಾಗಿ ಸಿದ್ಧವಾಗತೊಡಗಿದರು.

ಹೆಗಡೆಯವರು ಬಂದರು. ಅವರು, ತಿರುಗಾಟಕ್ಕೆ ಹೋಗುವಾಗ ಎಲ್ಲಿಗೆ ಹೋಗುತ್ತೇನೆ, ಯಾವಾಗ ಬರುತ್ತೇನೆ ಎಂದೆಲ್ಲ ಹೇಳುವ ಪದ್ಧತಿ ಇರಲಿಲ್ಲ. ಹೊರಗೆ ಹೋದರೆ ವಾರ, ಹದಿನೈದು ದಿನ, ಕೊನೆಗೆ ತಿಂಗಳೂ ಆಗುವುದಿತ್ತು. ಕಡೆಗೊಂದು ದಿನ ಕಣ್ಣು ಕೆಂಪು ಮಾಡಿಕೊಂಡು ಬರುತ್ತಿದ್ದರು. ಹೆಚ್ಚಾಗಿ ಅವರು ಬರುವಾಗಲೆಲ್ಲ ಸಿಟ್ಟಿನ ಮೇಲೇ ಇರುತ್ತಿದ್ದರು. ಏನಾದರೂ ವಿಷಯ ಹುಡುಕಿ ಮನೆಯವರನ್ನು, ಅವರಿಗೆ ಆಗದವರನ್ನು ಬಯ್ಯುತ್ತಿದ್ದರು. ದಾರಿಯಲ್ಲಿ ಒಂದು ಅಡಿಕೆ, ಗೇರು ಬೀಜ ಬಿದ್ದುಕೊಂಡಿದ್ದರೂ ಸಾಕು, ಬಯ್ಯಲು ಚಾಲು. ಎದುರುತ್ತರ